# ನಂಜುಂಡ ಎನ್ನುವ ಅಪೂರ್ಣ ಚಿತ್ರಕಥೆ

ಹೊಸ ಕಾಲಮಾನದಲ್ಲಿ ದೀರ್ಘಕಾಲ ಸಿನಿಮಾ ಬರವಣಿಗೆಯನ್ನೇ ನಂಬಿಕೊಂಡು ಬದುಕಿದ್ದು ನಂಜುಡ (ನಿಧನ: ಏಪ್ರಿಲ್ 23) ಅವರೊಬ್ಬರೇ ಇರಬೇಕು. ಲೌಕಿಕದ ಸಮಸ್ತ ವಿದ್ಯಮಾನಗಳನ್ನು ಸಿನಿಮಾ ದೃಶ್ಯಗಳಾಗಿಯೇ ಕಾಣುತ್ತಿದ್ದ ಅವರು, ನಿಜ ಜೀವನದಲ್ಲಿ ಸವಿಗಿಂತಲೂ ಹೆಚ್ಚು ಉಂಡಿದ್ದು ನಂಜನ್ನೇ.

**■ ಬೆಳಚಿಕ್ಕನಹಳ್ಳಿ ಶ್ರೀನಾಥ್**

ಚಿತ್ರ: ಕೆ.ಎನ್. ನಾಗೇಶ್ ಕುಮಾರ್

ಸಿನಿಮಾ ರಂಗದ ಬಗ್ಗೆ ಜನರಲ್ಲಿ ಅನೇಕ ರೀತಿಯ ಅತಿರಂಜಿತ ಕಲ್ಪನೆಗಳಿವೆ. ಅಲ್ಲಿನ ಹಣ, ಜನಪ್ರಿಯತೆ, ಅದ್ದೂರಿತನ ಎಲ್ಲವೂ ಸಾಮಾನ್ಯನ ಮಟ್ಟಿಗೆ ಒಂದು ದೊಡ್ಡ ಆಕರ್ಷಣೆ. ಆದರೆ, ಅದಷ್ಟೇ ಸಿನಿಮಾ ಅಲ್ಲ; ಅಲ್ಲಿ ಸಾವಿರಾರು ಕಲಾವಿದರ, ತಂತ್ರಜ್ಞರ ಹಸಿವಿನ ಕೂಗಿದೆ; ಸೋಲಿನ ಪರಿತಾಪವಿದೆ; ಕಳೆದುಹೋದ ಬದುಕನ್ನು ಕುರಿತ ಹಳಹಳಿಕೆಯಿದೆ. ಇಂಥ ನೋವು, ನಿಟ್ಟುಸಿರು, ಪರಿತಾಪಗಳ ಬದುಕಿಗೆ ಕೊರಳೊಡ್ಡಿ ಮೂರು ದಶಕಗಳ ಕಾಲ ಸೆಣೆಸಿದವರು ಚಿತ್ರಬರಹಗಾರ, ನಿರ್ದೇಶಕ ನಂಜುಂಡ ಕೃಷ್ಣ.

ಬಣ್ಣದ ಲೋಕದ ಸೆಳೆತ ಎಷ್ಟು ತೀವ್ರವಾದದ್ದು ಎನ್ನುವುದಕ್ಕೆ ಕೆ. ನಂಜುಂಡ ಅವರ ಬದುಕೇ ಒಂದು ನಿದರ್ಶನ. ಅವರದ್ದು ಅತ್ಯಂತ ಸಾಧಾರಣ ಕುಟುಂಬ. ಅವರ ತಂದೆ ಬೆಂಗಳೂರಿನ ಶಿವಾಜಿನಗರದ ಒಬ್ಬ ಕಡುಬಡ ಟೈಲರ್; ಮನೆ ತುಂಬ ಮಕ್ಕಳು. ಹಿರಿಯ ಮಗನಾಗಿದ್ದ ನಂಜುಂಡ ಅವರಿಗೆ ಕುಟುಂಬದಲ್ಲಿ ಹೆಚ್ಚಿನ ಜವಾಬ್ದಾರಿಗಳಿದ್ದವು. ಅಪರೂಪಕ್ಕೊಮ್ಮೆ ಸಿನಿಮಾ ನೋಡುವುದಕ್ಕೂ ಪರದಾಡುತ್ತಿದ್ದ ಕುಟುಂಬದಲ್ಲಿ ಹುಟ್ಟಿ ಬೆಳೆದಿದ್ದ ಅವರು ಸಿನಿಮಾ ನಿರ್ದೇಶಕನಾಗುವ ದೊಡ್ಡ ಕನಸು ಕಂಡರು. ಅದಕ್ಕೆ ತಕ್ಕಂತೆ ಅವರಿಗೆ ಒಳ್ಳೆಯ ಗುರುವೇ ಸಿಕ್ಕರು; ಅವರೇ ಆ್ಯಕ್ಷನ್ ಚಿತ್ರಗಳನ್ನು ನಿರ್ದೇಶಿಸುವುದರಲ್ಲಿ ನಿಸ್ಸೀಮರೆನಿಸಿದ್ದ ಕೆ.ವಿ. ರಾಜು; ಅವರು ಚಿತ್ರಕಥೆ, ಸಂಭಾಷಣೆ ಬರವಣಿಗೆಯಲ್ಲೂ ಸಿದ್ಧಹಸ್ತರೆಂದು ಪ್ರಸಿದ್ಧಿ ಪಡೆದಿದ್ದರು. ನಂಜುಂಡ ಅವರಿಗೆ ಚಿತ್ರಕಥೆಗಾರ, ಸಂಭಾಷಣೆಕಾರರಾಗಲು ಅವರೇ ಪ್ರೇರಣೆಯಾಗಿದ್ದಿರಬೇಕು. ಆದರೆ, ಚಿತ್ರರಂಗದಲ್ಲಿ ಗುರುವಿಗೆ ಸಿಕ್ಕ ಅವಕಾಶ, ಯಶಸ್ಸು, ಗೌರವ ಶಿಷ್ಯನಿಗೆ ಸಿಗಲೇ ಇಲ್ಲ.

30 ವರ್ಷಗಳ ವೃತ್ತಿಬದುಕಿನಲ್ಲಿ ನಂಜುಂಡ ಸುಮಾರು 40 ಚಿತ್ರಗಳಿಗೆ ಬರಹಗಾರರಾಗಿದ್ದಾರೆ. ಅವುಗಳಲ್ಲಿ ‘ರೋಷಗಾರ’, ‘ಸರ್ವರ್ ಸೋಮಣ್ಣ’, ‘ಓ ಮಲ್ಲಿಗೆ’, ‘ಮಾಂಗಲ್ಯಂ ತಂತುನಾನೇನ’, ‘ಉಸಿರೇ’, ‘ಮೇಕಪ್’, ‘ಗೋಕರ್ಣ’, ‘ಕುಟುಂಬ’, ‘ಕುರಿಗಳು ಸಾರ್ ಕುರಿಗಳು’ – ಹೀಗೆ ಹಾಸ್ಯ, ಫ್ಯಾಮಿಲಿ ಡ್ರಾಮಾ, ಪ್ರೇಮ ಕಥೆ ಎಲ್ಲ ಥರದ ಚಿತ್ರಗಳೂ ಸೇರಿವೆ. ಇವುಗಳ ಜೊತೆಗೆ ನಂಜುಂಡ ಎರಡು ಚಿತ್ರಗಳನ್ನೂ ನಿರ್ದೇಶಿಸಿದ್ದಾರೆ: ‘ಕನಸಲೂ ನೀನೇ ಮನಸಲೂ ನೀನೇ’ ಹಾಗೂ ‘ಮೆಲೋಡಿ’ – ಈ ಎರಡೂ ಚಿತ್ರಗಳು ಯಶಸ್ಸು ಕಾಣಲಿಲ್ಲ. ಮುಂದೆ ನಂಜುಂಡ ಹೊಟ್ಟೆಪಾಡಿಗಾಗಿ ಚಿತ್ರಕಥೆ, ಸಂಭಾಷಣೆಯನ್ನೇ ಅವಲಂಬಿಸಬೇಕಾಯಿತು. 1993ರಿಂದ 2007ರವರೆಗೆ ಅವರು ವರ್ಷಕ್ಕೆ ಕನಿಷ್ಠ ಎಂದರೂ ಎರಡು ಮೂರು ಚಿತ್ರಗಳಿಗೆ ಸಂಭಾಷಣೆ ಬರೆದಿದ್ದಾರೆ. ನಂತರ ಅವಕಾಶಗಳು ಮರೀಚಿಕೆಯಾಗತೊಡಗಿದವು. ಎರಡು ಮೂರು ವರ್ಷಕ್ಕೊಂದು ಸಿನಿಮಾ ಸಿಕ್ಕರೆ ಹೆಚ್ಚು ಎನ್ನುವಂತಾಯಿತು.

ಕನ್ನಡ ಚಿತ್ರರಂಗವನ್ನೇ

